# ಕನಸುಗಳು ಮಣ್ಣುಪಾಲು!

ಮಂಜಯ್ಯ ನುಡಿದ, ‘ನೀನಾದರೂ ಏನು ಮಾಡಲಾಗುತ್ತೆ ಜಂಪಯ್ಯ..? ನಮ್ಮನ್ನು ಅಕ್ಕಿಕಾಳು ಕೊಟ್ಟು ಬಾ ಅಂದೆಯಾ ನೀನು.. ? ಇಲ್ಲವಲ್ಲ.. ಸ್ವಂತ ಸೂರು ಆಗಬಹುದು ಅಂತ ದುರಾಸೆಗೆ ನಾವೇ ತಾನೇ ಬಂದದ್ದು.. ಇಷ್ಟೇ ಇತ್ತು ಇಲ್ಲಿಯ ಋಣ.. ಹೊರಡೋಣ ಬಿಡು.. ಯಾಕೆ ಚಿಂತೆ ಮಾಡ್ತೀ..? ಎಲ್ಲಿದ್ದೆಯೋ ಮಗನೆ.. ಅಲ್ಲೇ ಅಂತ.. ನಾಳೆನೇ ಹೋಗಿ ಕಾರಗದ್ದೇಲಿ ಸೂರು ಹುಡುಕೋಣ.. ಹೇಗೂ ಕಾಮಗಾರಿ ಆರಂಭವಾಗುತ್ತೆ.. ರಟ್ಟೇಲಿ ಬಲ ಇದೆ.. ದುಡಿದು ತಿಂದರಾಯಿತು..’ ಅವನು ಸರಳವಾಗೆಂಬಂತೆ ನುಡಿದ. ಅಷ್ಟು ಸಹಜವಾಗಿ ಅರಗಿಸಿಕೊಳ್ಳವುದು ಜಂಪಯ್ಯನಿಗೆ ಸಾಧ್ಯವಾಗಲಿಲ್ಲ. ಅಜ್ಜರಕಾಡಿಗೆ ಬಂದವನಿಗೆ ಅದೇನೋ ಬಂಧ ಬೆಸೆದಿತ್ತು. ಅವನು ಅಲ್ಲಿ ಬೆಳೆಸಿದ ಬೆಳೆಯೊಂದಿಗೇ, ಅವನ ಕನಸುಗಳೂ ಬೆಳೆದಿತ್ತು. ಅದರೀಗ..ಅಷ್ಟು ವರ್ಷಗಳ ಶ್ರಮ, ಆಸೆ, ಕನಸು ಎಲ್ಲವೂ ಮಣ್ಣುಪಾಲಾಗುವ ಹಂತಕ್ಕೆ ಬಂದಿತ್ತು. ಅವನಿಗೆ ಅ ಮಾಲೀಕನನ್ನು ಮಾತನಾಡಿಸಿ ಸಮಾಧಾನ ಮಾಡುವ ಸಾಧ್ಯತೆ ಕಮ್ಮಿ ಎಂದು ಅಷ್ಟು ಮಾತುಕತೆಯಲ್ಲೇ ಅರಿವಾಗಿ ಬಿಟ್ಟಿತ್ತು. ದುಡ್ಡಿನ ಬಲದಲ್ಲಿ ಆತ ಯಾವ ಮಟ್ಟಕ್ಕೂ ಇಳಿಯ ಬಲ್ಲರು.. ಆದರೆ ತಮ್ಮಂಥ ಕೆಳಮಧ್ಯಮ ವರ್ಗದ ಜನರಿಗೆ ಯಾವ ಕಾನೂನು, ಪತ್ರಗಳ ಅಗತ್ಯ ಇಲ್ಲ.. ಅವೆಲ್ಲವನ್ನೂ ಮನಸ್ಸಿಗನುಗುಣವಾಗಿ ಪರಿಪಕ್ವವಾಗಿ ಪಾಲಿಸಿಕೊಂಡು ಬರುವ ಜನ ತಾವು..! ಸತ್ಯಕ್ಕೆ ಬೆಲೆ ಕೊಡುವ ಮಂದಿ!

ಅವರ ವಸ್ತು ಅವರದ್ದೇ.. ತಮ್ಮದೆಂದೂ ಆಗಲು ಸಾಧ್ಯವಿಲ್ಲ.. ಎಷ್ಟು ಬೇಗ ಈ ಸತ್ಯವನ್ನು ಹೃದಯ ಅಂಗೀಕರಿಸಿಕೊಳ್ಳುತ್ತದೋ, ಅಷ್ಟು ಮನಸ್ಸಿಗೆ ನೋವು ಕಡಿಮೆ..!

ಜಂಪಯ್ಯ ಹೃದಯದ ಮೇಲೆ ಕಲ್ಲು ಹೇರಿಕೊಂಡವನಂತೆ ಕುಳಿತ. ಇಷ್ಟು ಕಾಲ ಅದೆಲ್ಲವನ್ನೂ ಕಳಚಿಕೊಂಡಂತಿದ್ದ ಕಾಯನಿಗೆ ಈಗ ಮೋಹ ಬೆಳೆದಿತ್ತು. ಯಾವುದೂ ಬೇಡ ಎಂದುಕೊಂಡವನಿಗೆ ಈಗ ಅದನ್ನು ಬಿಟ್ಟು ಹೋಗಬೇಕಲ್ಲ ಎಂದು ವಿಲಪಿಸಿದ. ಪ್ರಪಂಚದ

